# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ (ನಿ), ಶಿವಮೊಗ್ಗ

ಎ.ಪಿ.ಎಂ.ಸಿ. ಯಾರ್ಡ್, ಸಾಗರ ರಸ್ತೆ, ಶಿವಮೊಗ್ಗ –577 204

ದೂ.ಸಂ. 08182–250513,250514

**ಇ–ಮೇಲ್:homamcos@gmail.com ವೆಬ್‌ಸೈಟ್:www.mamcos.info**


## ಸಂಘದ ಸದಸ್ಯರ ಮತ್ತು ಅವರ ಅವಲಂಬಿತ ಕೂಲಿ ಕಾರ್ಮಿಕರ

# ‘ಗುಂಪು ವಿಮಾ ಅಭಿರಕ್ಷೆ ಯೋಜನೆ’

**‘ಮಾಮ್‌ಕೋಸ್’** ಸಂಸ್ಥೆಯು ತನ್ನ ಸದಸ್ಯರಿಗಾಗಿ ಅಪಘಾತ **‘ಗುಂಪು ವಿಮಾ ಅಭಿರಕ್ಷೆ ಯೋಜನೆ’ಯನ್ನು** 2007–08 ರಿಂದ ಜಾರಿಗೆ ತಂದಿದ್ದು, 2022–23ನೇ ಸಾಲಿಗೂ ಮುಂದುವರೆಸುತ್ತಿದೆ.

**ಈ ಯೋಜನೆಯ ವಿವರಗಳು :**

01. ಸಂಘದ ಸದಸ್ಯರು ತಮ್ಮ ಕುಟುಂಬದವರನ್ನು ಈ ಯೋಜನೆ ವ್ಯಾಪ್ತಿಗೆ ಸೇರಿಸಲು ನಿಗದಿತ ನಮೂನೆಯಲ್ಲಿ ಕುಟುಂಬದ ಸದಸ್ಯರ ಮಾಹಿತಿಯನ್ನು ನೀಡಿ ವಂತಿಕೆಯನ್ನು ಸಲ್ಲಿಸಬೇಕಿರುತ್ತದೆ.

02. ಈ ಯೋಜನೆಯಡಿಯಲ್ಲಿ ಸಂಘದ ಸದಸ್ಯರು ಸಂಘದ ಶಾಖೆಗಳಲ್ಲಿ ವಂತಿಕೆ ಮೊಬಲಗನ್ನು ಪಾವತಿಸಿದರೆ ಆ ಸದಸ್ಯರಿಗೆ ಮತ್ತು ಅವರ ಹೆಸರಿಸದ ಒಬ್ಬ ಅವಲಂಬಿತ ಕೂಲಿ ಕಾರ್ಮಿಕರಿಗೆ ಹಾಗೂ ಕುಟುಂಬದ ಸದಸ್ಯರಿಗೆ ವಿಮೆ ಮಾಡಲಾಗುವುದು 2022–23ನೇ ಸಾಲಿನ ಗುಂಪು ವಿಮಾ ಅಭಿರಕ್ಷೆ ಯೋಜನೆಯ ಅವಧಿಯಲ್ಲಿ ಸದಸ್ಯರ ಜಮೀನಿಗೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುವ ಸಮಯದಲ್ಲಿ ಅಪಘಾತಕ್ಕೆ ಒಳಗಾಗಿ ಚಿಕಿತ್ಸೆ ಪಡೆಯುವವರಿಗೆ ಆಸ್ಪತ್ರೆಯ ಖರ್ಚುನ್ನು ಹಾಗೂ ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಮರಣ ಪರಿಹಾರ ಸೌಲಭ್ಯವನ್ನು ಕೋಷ್ಟಕದಲ್ಲಿ ನಿಗದಿಪಡಿಸಿದಂತೆ ನೀಡಲಾಗುವುದು.

03. ಈ ಯೋಜನೆಯ ಸದಸ್ಯತ್ವ ಪಡೆಯುವವರ ವಯೋಮಿತಿಯು ಮೂರು ಹಂತಗಳಲ್ಲಿದ್ದು, ಕೋಷ್ಟಕದ ಅನುಸಾರ ಸದಸ್ಯರು ತಮ್ಮ ವಯಸ್ಸಿಗನುಗುಣವಾಗಿ ಪ್ರತ್ಯೇಕವಾಗಿ ವಂತಿಕೆಯನ್ನು ನೀಡಿ ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

04. ಯೋಜನೆಯ ಪರಿಹಾರದ ಗರಿಷ್ಠ ಮಿತಿ ಕೋಷ್ಟಕದಲ್ಲಿ ನಿಗದಿ ಪಡಿಸಿದ ಮೊತ್ತಕ್ಕೆ ಮಾತ್ರ ಸೀಮಿತವಾಗಿರುತ್ತದೆ.

05. ನೋಂದಣಿ ಅವಧಿ :

| ಹಂತ | ವಿಮಾ ಕಂತು ಸಂಗ್ರಹಿಸುವ ಅವಧಿ | ಯೋಜನೆ ಚಾಲ್ತಿಯಲ್ಲಿರುವ ಅವಧಿ |
|---|---|---|
| ಒಂದನೇ ಹಂತ | 01/04/2022 ರಿಂದ 30/05/2022 | 01/06/2022 ರಿಂದ 31/05/2023 |
| ಎರಡನೇ ಹಂತ | 01/10/2022 ರಿಂದ 29/11/2022 | 01/12/2022 ರಿಂದ 30/11/2023 |

06. ವಿಮಾ ಕಂತು (ಪ್ರೀಮಿಯಂ) ಹಾಗೂ ಪರಿಹಾರದ ವಿವರ

| ಕ್ರ ಸಂ. | ವಯೋಮಿತಿ | ಪರಿಹಾರದ ಮೊತ್ತ | ವಿಮಾಕಂತು ಮೊಬಲಗು |
|---|---|---|---|
| 1 | 70 ವರ್ಷದೊಳಗಿನವರಿಗೆ (ಸದಸ್ಯರು ಹಾಗೂ ಅವರ ಹೆಸರಿಸದ ಅವಲಂಬಿತ ಕೂಲಿ ಕಾರ್ಮಿಕ) | • ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಟ ರೂ.1,50,000/– ದವರೆಗೆ & ಅಬ್ಯುಲೆನ್ಸ್ ವೆಚ್ಚ ಗರಿಷ್ಠ ರೂ.1000<br>• ಅಪಘಾತವಾಗಿ ಮರಣ ಹೊಂದಿದಲ್ಲಿ ಸದಸ್ಯರಿಗೆ & ಅವಲಂಬಿತ ಕೂಲಿ ಕಾರ್ಮಿಕರಿಗೆ ಮರಣ ಪರಿಹಾರ ಗರಿಷ್ಟ ರೂ.6,00,000/–& ಮೃತರನ್ನು ಆಸ್ಪತ್ರೆಯಿಂದ ಮನೆಗೆ ಹೊತ್ತು ಹೊಯ್ಯಲು ಗರಿಷ್ಠ ರೂ. 2500/– | **ರೂ.1050** |
| 2 | 71–80 ವರ್ಷದೊಳಗಿನವರಿಗೆ (ಸದಸ್ಯರಿಗೆ ಮಾತ್ರ 71–80 ವರ್ಷ ಮತ್ತು ಅವರ ಹೆಸರಿಸದ ಅವಲಂಬಿತ ಕೂಲಿ ಕಾರ್ಮಿಕರು 70 ವರ್ಷದೊಳಗಿನವರಿರಬೇಕು) | • ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಟ ರೂ. 1,00,000/– ವರೆಗೆ & ಅಬ್ಯುಲೆನ್ಸ್ ವೆಚ್ಚ ಗರಿಷ್ಠ ರೂ. 1000<br>• ಅಪಘಾತವಾಗಿ ಮರಣ ಹೊಂದಿದಲ್ಲಿ ಸದಸ್ಯರಿಗೆ & ಅವಲಂಬಿತ ಕೂಲಿ ಕಾರ್ಮಿಕರಿಗೆ ಮರಣ ಪರಿಹಾರ ಗರಿಷ್ಟ ರೂ. 5,00,000/–& ಮೃತರನ್ನು ಆಸ್ಪತ್ರೆಯಿಂದ ಮನೆಗೆ ಹೊತ್ತು ಹೊಯ್ಯಲು ಗರಿಷ್ಠ ರೂ. 2500/– | **ರೂ.850** |
| 3. | 81–90 ವರ್ಷ ಮತ್ತು ಅವರ ಅವರ ಹೆಸರಿಸದ ಅವಲಂಬಿತ ಕೂಲಿ ಕಾರ್ಮಿಕರು 70 ವರ್ಷದೊಳಗಿನವರಿರಬೇಕು) | • ಸದಸ್ಯ ಮತ್ತು ಅವರ ಅವಲಂಬಿತ ಕೂಲಿ ಕಾರ್ಮಿಕರಿಗೆ ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಟ ರೂ.1,00,000/– ದವರೆಗೆ & ಅಂಬ್ಯುಲೆನ್ಸ್ ವೆಚ್ಚ ಗರಿಷ್ಠ ರೂ.1000<br>• ಅಪಘಾತವಾಗಿ ಮರಣ ಹೊಂದಿದಲ್ಲಿ ಅವಲಂಬಿತ ಕೂಲಿ ಕಾರ್ಮಿಕರಿಗೆ ಮಾತ್ರ ಮರಣ ಪರಿಹಾರ ಗರಿಷ್ಟ ರೂ.4,00,000/–& ಮೃತರನ್ನು ಆಸ್ಪತ್ರೆಯಿಂದ ಮನೆಗೆ ಹೊತ್ತು ಹೊಯ್ಯಲು ಗರಿಷ್ಠ ರೂ. 2500/– | **ರೂ.770/–** |
| 4 | ಸದಸ್ಯರ ಕುಟುಂಬಕ್ಕೆ (10–70 ವರ್ಷದೊಳಗಿನವರಿಗೆ ಸದಸ್ಯರ ಗಂಡ/ ಹೆಂಡತಿ/ ಮಗ/ಸೊಸೆ/ ಅವಿವಾಹಿತಮಗಳು/ಸಹೋದರ/ ಸಹೋದರಿ) | • ಅಪಘಾತವಾದಲ್ಲಿ ಮಾತ್ರ ಆಸ್ಪತ್ರೆಯ ಚಿಕಿತ್ಸಾ ಖರ್ಚು ಗರಿಷ್ಟ ರೂ. 50,000/– ದವರೆಗೆ & ಅಂಬ್ಯುಲೆನ್ಸ್ ವೆಚ್ಚ ಗರಿಷ್ಠ ರೂ.1000<br>• ಅಪಘಾತವಾಗಿ ಮರಣ ಹೊಂದಿದಲ್ಲಿ ಮರಣ ಪರಿಹಾರ ಗರಿಷ್ಟ ರೂ. 2,00,000/– & ಮೃತರನ್ನು ಆಸ್ಪತ್ರೆಯಿಂದ ಮನೆಗೆ ಹೊತ್ತು ಹೊಯ್ಯಲು ಗರಿಷ್ಠ ರೂ. 2500/– | **ರೂ. 170/– ತಲಾ ಒಬ್ಬರಿಗೆ** |

07. ಅಪಘಾತದಿಂದ ತೀವ್ರ ಗಾಯಗೊಂಡಲ್ಲಿ/ಅಂಗವೈಕಲ್ಯತೆ ಉಂಟಾದಲ್ಲಿ ಪರಿಹಾರವನ್ನು ಪಡೆಯಲು ರೋಗಿಯ/ಸದ್ಯಸರ ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಸಂಘಕ್ಕೆ ಸಲ್ಲಿಸಬೇಕು.
    - ಪೋಲೀಸರಿಗೆ ನೀಡಿದ ದೂರು ಅರ್ಜಿಯ (ಪೋಲೀಸ್ ಕಂಪ್ಲೇಂಟ್) ಪ್ರತಿ/ಪ್ರಾಥಮಿಕ ತನಿಖಾ ವರದಿ (ಎಫ್.ಐ.ಆರ್.) ಅಥವಾ C-MIS Copy.
    - ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ/ಹೊರ ರೋಗಿಯಾಗಿ ಚಿಕಿತ್ಸೆ ಪಡೆದ ದಾಖಲೆಗಳು.
    - ಗಾಯದ ಹಾಗೂ ಅಂಗವಿಕಲತೆಯ ಸ್ವರೂಪದ ಬಗೆಗೆ ವೈದ್ಯರ ಪ್ರಮಾಣ ಪತ್ರ.
    - ಭಾಗಶಃ ಅಂಗವಿಕಲತೆ/ಅಂಗ ಊನವಾಗಿದ್ದರೆ ಇದರ ಬಗೆಗೆ ಎಷ್ಟು ಪ್ರಮಾಣದ ಶೇಖಡವಾರು ಅಂಗವೈಕಲ್ಯವಾಗಿರುವ ಬಗೆಗೆ ಚಿಕಿತ್ಸೆ ನೀಡಿದ ವೈದ್ಯರಿಂದ ಪ್ರಮಾಣ ಪತ್ರ ಸಲ್ಲಿಸಬೇಕು ಮತ್ತು ಇದರೊಂದಿಗೆ ಆಸ್ಪತ್ರೆಯಿಂದ ಡಿಜಿಟಲ್ ಫೋಟೋವನ್ನು ಪಡೆದು ಸಂಘಕ್ಕೆ ಸಲ್ಲಿಸುವುದು.
    - ಆಸ್ಪತ್ರೆಯ ಬಿಲ್, ರಶೀದಿ, ಔಷಧಿ ಉಪಯೋಗಿಸಿದ ದಾಖಲೆ ಬಿಲ್‌ಗಳ ಮೂಲ ಪತ್ರಿ ಮತ್ತು ಅದರೊಂದಿಗೆ ಸಂಬಂಧಿಸಿ ಪ್ರೀಸ್ಕ್ರಿಪಶನ್‌ಗಳ ಮೂಲ ಪತ್ರಿ, ಡಿಸ್ಚಾರ್ಜ್ ಸಮ್ಮರಿ ಮೂಲ ಪ್ರತಿ, ಅಂಬ್ಯುಲೆನ್ಸ್ ಬಿಲ್, ಎಲ್ಲಾ ಮಾದರಿಯ ಲ್ಯಾಬ್ ರಿಪೋರ್ಟ್ಸ್ ಇತ್ಯಾದಿ.
    - ಆಸ್ಪತ್ರೆಗೆ ದಾಖಲಾದ ಮತ್ತು ಬಿಡುಗಡೆಯಾದ ದಾಖಲೆ ಮೂಲ ಪತ್ರಿ.
    - ಅಪಘಾತ ನಡೆದ ಜಾಗದ ಫೋಟೋ, ಪಹಣಿ ಮತ್ತು ಗಾಯದ ತೀವ್ರತೆ ತಿಳಿಯಲು ಗಾಯಾಳುವಿನ ಫೋಟೋ, ಅಗತ್ಯದ ಇತರ ದಾಖಲೆಗಳು.

08. ಅಪಘಾತವಾಗಿ ಮರಣ ಹೊಂದಿದ ಸಂದರ್ಭದಲ್ಲಿ ಕಡ್ಡಾಯವಾಗಿ ಮೃತರ ವಾರಸುದಾರರು ಎಫ್.ಐ.ಆರ್. ಪ್ರತಿ, ಮರಣೋತ್ತರ ಪರೀಕ್ಷಾ ವರದಿ, ಮೃತರ ಮರಣ ಸಮರ್ಥನಾ ಪತ್ರ, ನಷ್ಟ ಭರ್ತಿ ಪ್ರಮಾಣ ಪತ್ರ ಹಾಗೂ ಅಗತ್ಯದ ಇತರ ದಾಖಲೆಗಳನ್ನು ಸಲ್ಲಿಸಬೇಕಿರುತ್ತದೆ.

09. ಅಪಘಾತವಾಗಿ ವಿಷಯವನ್ನು 10 ದಿನಗಳೊಳಗಾಗಿ ಸಂಘದ ಸಂಬಂಧಿಸಿದ ಶಾಖೆಗೆ ಲಿಖಿತವಾಗಿ ತಿಳಿಸಬೇಕಾಗಿರುತ್ತದೆ.

10. ಕೋಷ್ಟಕದಲ್ಲಿ ನಮೂದಿಸಿದಂತೆ ಕಡ್ಡಾಯವಾಗಿವಯಸ್ಸಿನ ಬಗೆಗೆ ಅಧಿಕೃತ ದಾಖಲೆಯನ್ನು ಸಂಬಂಧಿಸಿದ ಶಾಖೆಯಲ್ಲಿ ನೀಡಿ ವಿಮಾ ವಂತಿಕೆಯನ್ನು ಪಾವತಿಸುವುದು.

ವಾರ್ಷಿಕ ಮಹಾ ಸಭೆಯಲ್ಲಿ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯದಂತೆ ಮತ್ತು ಸದಸ್ಯರ ಹಿತದೃಷ್ಟಿಯಿಂದ ಸದಸ್ಯರ ವಯೋಮಿತಿಗನುಸಾರವಾಗಿ ವಿಮಾ ಕಂತನ್ನು ನೇರವಾಗಿ ಸದಸ್ಯರ ಉಳಿತಾಯ ಖಾತೆ ಮೂಲಕ ಜಮಾ ಪಡೆದುಕೊಳ್ಳಲಾಗುವುದು ಎಂದು ತಿಳಿಸುತ್ತಾ ಈ ಬಗೆಗೆ ತಾವು ಈಗಾಗಲೇ ಕೆ.ವೈ.ಸಿ. ಅಪ್‌ಡೇಟ್‌ಗೆ ಎಂದು ನೀಡಿದ ಮೊಬೈಲ್ ನಂಬರಿಗೆ ವಿಮಾ ಕಂತು ಕಟಾಯಿಸಿದ ಎಸ್.ಎಂ.ಎಸ್. ಕಳುಹಿಸಲಾಗುವುದು ಒಂದು ವೇಳೆ ನೋಂದಣಿ ಮಾಡಿದ ಸದಸ್ಯರು ಈ ಯೋಜನೆ ಸೌಲಭ್ಯ ತಮಗೆ ಅವಶ್ಯಕತೆ ಇಲ್ಲದಿದ್ದಲ್ಲಿ ತಕ್ಷಣ ವಂತಿಕೆ ಖರ್ಚು ಹಾಕಿರುವ ಶಾಖೆಗೆ ಅರ್ಜಿಯನ್ನು ನೀಡುವುದರ ಮೂಲಕ ಸ್ಥಗಿತಗೊಳಿಸಿಕೊಳ್ಳಬಹುದು ಎಂದು ತಿಳಿಸುತ್ತಾ, **ಈ ಯೋಜನೆಯ ಸದುಪಯೋಗವನ್ನು ಸದಸ್ಯರು ಪಡೆಯುವುದಲ್ಲದೆ, ಸಂಘದ ಇತರ ಸದಸ್ಯ ಮಿತ್ರರಲ್ಲಿ ಈ ಯೋಜನೆಯ ಕುರಿತು ಅರಿವು ಮೂಡಿಸುವುದರ ಜೊತೆಗೆ ಸಂಘವು ಸದಸ್ಯರ ಹಿತರಕ್ಷಣೆಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿದ್ದು ಸದಸ್ಯ ಮಿತ್ರರು ಸಂಘಕ್ಕೆ ಗರಿಷ್ಠ ಪ್ರಮಾಣದಲ್ಲಿ ಅಡಿಕೆ ಹಾಕಿ ವ್ಯವಹರಿಸಿ ಸಂಘದ ಏಳಿಗೆಗೆ ಪಾತ್ರದಾರರಾಗಬೇಕಾಗಿ ಕೋರಿದೆ.**

**ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ಸಂಘದ ಶಾಖೆ/ಏಜೆನ್ಸಿಯನ್ನು ಸಂಪರ್ಕಿಸುವುದು.**

| | | | |
|---|---|---|---|
| ಶಿವಮೊಗ್ಗ ಶಾಖೆ | : 08182–250920,94498–63266 | ಸಾಗರ ಶಾಖೆ | : 08183–226047,94498–63265 |
| ಹೊಸನಗರ ಶಾಖೆ | : 08182–221376 ,94498–63264 | ತೀರ್ಥಹಳ್ಳಿ ಶಾಖೆ | : 08181–228447,94498–63267 |
| ಭದ್ರಾವತಿ ಶಾಖೆ | : 08282–266239,94498–63263 | ಬೀರೂರು ಶಾಖೆ | : 08267–255613,94498–63258 |
| ತರೀಕೆರೆ ಶಾಖೆ | : 08261–222368 ,94498–63261 | ಕೊಪ್ಪ ಶಾಖೆ | : 08265–221043,94498–63259 |
| ಚನ್ನಗಿರಿ ಶಾಖೆ | : 08189–228227 ,94498–63262 | ಶೃಂಗೇರಿ ಶಾಖೆ | : 08265–250206,94498–63260 |
| ಶಿಕಾರಿಪುರ ಶಾಖೆ | : 08187–298054,94482–85788 | | |